ಅವಕಾಶ ದೊರೆಯಿತು.

(ಬನಿಯನು ಓಡಿ ಬಂದು ವಿವೇಕಾನಂದರ ಪಾದಗಳನ್ನು ಹಿಡಿದುಕೊಳ್ಳುವನು)

ಬನಿಯ : ಸ್ವಾಮೀಜಿ, ನಾನು ಮೂರ್ಖ, ತಮ್ಮಂತಹ ಮಹಾತ್ಮರನ್ನು ನಾನು ಎಷ್ಟು ಹೀಯಾಳಿಸಿದೆ. ಕ್ಷಮಿಸಿ, ಸ್ವಾಮಿಜಿ, ಕ್ಷಮಿಸಿ! ದೇವರು ಇದ್ದಾನೆ, ತನ್ನ ಭಕ್ತರನ್ನು ಕಾಪಾಡುತ್ತಾನೆ ಎಂದು ನೀವು ತೋರಿಸಿಯೇಬಿಟ್ಟಿರಿ.

(ಕಣ್ಣೀರು ಸುರಿಸುವನು)

ವಿವೇಕಾನಂದರು : ಅಪ್ಪಾ ಏಳು, ನೀನು ಹೀಯಾಳಿಸಿದುದಕ್ಕೆ ನಿನ್ನ ಮೇಲೆ ನನಗೇನೂ ಕೋಪವಿಲ್ಲ. ಅದೂ ಭಗವಂತನ ಇಚ್ಛೆ; ಆದರೆ, ಸಾಧುಗಳನ್ನು ಗೌರವಿಸುವ ನಮ್ಮ ಭಾರತ ದಲ್ಲಿಯೂ ಇಂತಹ ಅಭಿಪ್ರಾಯಗಳು, ಅಜ್ಞಾನ ತುಂಬಿವೆಯಲ್ಲಾ ಎಂಬುದೇ ನನ್ನ ಚಿಂತೆ. ಸಂನ್ಯಾಸಿಗಳು ಸಮಾಜದ ಬೆಳಕು, ಅವರು ತಾವೂ ಸಾಧನೆಯಲ್ಲಿ ಮುಂದುವರೆದು ಸಮಾಜಕ್ಕೂ ಸೇವೆ ಸಲ್ಲಿಸುವ ಆದರ್ಶವನ್ನು ಹೊಂದಿರುತ್ತಾರೆ.

ಬನಿಯ : ಸ್ವಾಮಿಜಿ, ನೀವು ನನ್ನ ಕಣ್ತೆರೆಸಿದಿರಿ. ನಾನು ಇನ್ನು ಮುಂದೆ ಬುದ್ಧಿ ಕಲಿಯುತ್ತೇನೆ. ನನ್ನ ಅಜ್ಞಾನ, ಅಹಂಕಾರವೆಲ್ಲ ಮುರಿಯಿತು.

(ಮತ್ತೆ ಸಾಷ್ಟಾಂಗ ನಮಸ್ಕಾರ ಮಾಡುವನು. ಮಿಠಾಯಿ ಯವನೂ ಇನ್ನಿತರರೂ ಸ್ವಾಮೀಜಿಯವರಿಗೆ ನಮಸ್ಕರಿಸುವರು)

(ಹಿನ್ನೆಲೆಯಲ್ಲಿ ಹಾಡು ತೇಲಿಬರುವುದು)

ಬ್ರಹ್ಮವಿದ್ಯೆಯ ದಿವ್ಯದೀಪ್ತಿಯ ದೇಶದೇಶದಲಿ
ಹರಡಿ, ಅಭಯವನೀಯುತಮೃತವ ಸುರಿದು ಪಾಲಿಸಿದೆ ।
ಗಗನಕೆತ್ತಿದೆ ಭಾರತಾಂಬೆಯ ಕೀರ್ತಿಕೇತನವ
ಓಜೆ ತುಂಬಿಹುದಾರ್ಯಮಾತೆಯ ಶ್ರೀನಿಕೇತನವ ॥
ನಿನ್ನ ಹೆಸರದೆ ಶಕ್ತಿಯೀಯುವ ದಿವ್ಯತರ ಮಂತ್ರ
ನಿನ್ನ ಮಾರ್ಗವೆ ಮುಕ್ತಿದಾಯಕವಾದ ವರ ಮಾರ್ಗ ।
ನಮ್ಮ ಹೃದಯಕೆ ಹೃದಯ ನೀನಯ್, ಶಕ್ತಿಸಾಗರನೆ
ಯಮನ ನುಂಗಿದ ರಾಜಯೋಗಿಯೆ, ರುದ್ರ ಸಂನ್ಯಾಸಿ ॥
ನಿನ್ನ ಧೈರ್ಯ ಸ್ಥೈರ್ಯ ದೃಢತೆಯು, ನಿನ್ನ ಪವಿಶಕ್ತಿ
ಭಾರತೀಯರಿಗಿಂದು ಬೇಕಾಗಿಹುದು ದಿವ್ಯಾತ್ಮ ।
ರುದ್ರ ನರ್ತನವೆಸಗು ಹೃದಯದಿ, ಬುದ್ಧಿ ಭೈರವನೇ
ರುದ್ರಭೂಮಿಗಳಾಗಲೆಮ್ಮೀ ಕ್ಷುದ್ರ ಹೃದಯಗಳು ॥

---

## ಪ್ರಹಸನ ಪ್ರಸಂಗ

ಸಾಕ್ರಟೀಸನು ಓರ್ವ ಅಸಾಧಾರಣ ದಾರ್ಶನಿಕ. ಒಮ್ಮೆ ರೋಮ್ ನಗರದ ನಿವಾಸಿಗಳು ಅಥೆನ್ಸಿನ ದೇವಾಲಯದ ಪೂಜಾರಿಯ ಬಳಿ ಹೋಗಿ ಅಥೆನ್ಸಿನಲ್ಲಿ ವಾಸಿಸುವ ಜನಗಳಲ್ಲಿ ಅತ್ಯಂತ ಮೇಧಾವಿ ವ್ಯಕ್ತಿ ಯಾರೆಂದು ಕೇಳಿದಾಗ ಪೂಜಾರಿಯು ಸಾಕ್ರಟೀಸನ ಹೆಸರನ್ನು ಹೇಳಿದನು. ವಿಷಯ ತಿಳಿದ ಕೂಡಲೇ, ಅಥೆನ್ಸಿನ ನಿವಾಸಿಗಳು ಸಾಕ್ರಟೀಸನ ಮನೆಗೆ ಹೋಗಿ, ತಮ್ಮ ಸಂತಸವನ್ನು ವ್ಯಕ್ತಪಡಿಸುತ್ತ ಹೇಳಿದರು: "ಸಾಕ್ರಟೀಸ್, ನೀನು ಅಥೆನ್ಸಿನಲ್ಲಿ ವಾಸಿಸುವ ಜನಗಳಲ್ಲಿ ಬಹಳ ಮೇಧಾವಿ ಎಂದು ಗೊತ್ತಾಯಿತು. ನಿನಗೆ ಅಭಿನಂದನೆಗಳು." ಸಾಕ್ರಟೀಸನು ಅದಕ್ಕುತ್ತರವಾಗಿ, "ಹೌದು ಹೌದು. ಅದು ನನಗೆ ಗೊತ್ತು." ಇಂತಹ ಉತ್ತರದಿಂದ ಆಶ್ಚರ್ಯಗೊಂಡ ಅಲ್ಲಿ ನೆರೆದಿದ್ದ ಜನರಿಗೆ ಸಾಕ್ರಟೀಸನ ಅಹಂಕಾರದ ಬಗ್ಗೆ ಅಸಮಾಧಾನವಾಯಿತು. ಇದನ್ನು ಗಮನಿಸಿದ ಸಾಕ್ರಟೀಸನು ಮತ್ತೆ ಹೇಳಿದ: "ಪ್ರಿಯ ಬಂಧುಗಳೇ, ನನಗೇನೂ ಗೊತ್ತಿಲ್ಲವೆಂದು ನನಗೆ ಚೆನ್ನಾಗಿ ಗೊತ್ತು." ಬಂದಿದ್ದ ಜನ ಸಾಕ್ರಟೀಸನ ಉತ್ತರವನ್ನು ಕೇಳಿ ಅವನಲ್ಲಿದ್ದ ವಿವೇಕ ಹಾಗೂ ವಿನಯವನ್ನು ಶ್ಲಾಘಿಸಿದರು.

ಐನ್‌ಸ್ಟೈನ್ ಪ್ರಪಂಚದ ಅತ್ಯಂತ ಮೇಧಾವಿ ವಿಜ್ಞಾನಿ ಯಷ್ಟೇ ಅಲ್ಲ, ದಾರ್ಶನಿಕನೂ ಕೂಡ. ಅವರು ತಾವು ಪ್ರತಿಪಾದಿಸಿದ ಸಾಪೇಕ್ಷ ಸಿದ್ಧಾಂತದ ಬಗ್ಗೆ ಹೀಗೆ ಅಭಿ ಪ್ರಾಯ ವ್ಯಕ್ತಪಡಿಸಿದರು: "ನನ್ನ ಸಾಪೇಕ್ಷ ಸಿದ್ಧಾಂತ ಜಗತ್ತಿನ ಎಲ್ಲರ ಮನ್ನಣೆ ಪಡೆದಿದೆ. ಸಂತೋಷ. ಅಮೆರಿಕ ದೇಶದ ಜನರು ನನ್ನನ್ನು ತಮ್ಮ ದೇಶದ ವಿಜ್ಞಾನಿ ಎಂದು ಘೋಷಿಸಿ ಕೊಂಡಾಡುತ್ತಾರೆ. ಜರ್ಮನಿಯ ನಿವಾಸಿಗಳು ನನ್ನನ್ನು ಅವರ ದೇಶದಲ್ಲಿ ಹುಟ್ಟಿ ಬೆಳೆದ ವಿಜ್ಞಾನಿ ಎಂದು ಘೋಷಿಸಿ ಕೊಂಡಾಡುತ್ತಾರೆ. ಅದೇ ಒಂದು ವೇಳೆ, ನಾನು ಪ್ರತಿ ಪಾದಿಸಿದ ಸಾಪೇಕ್ಷ ಸಿದ್ಧಾಂತ ಸುಳ್ಳಾಗಿದ್ದರೆ, ಅಮೆರಿಕನ್ನರು ನನ್ನನ್ನು ಜರ್ಮನಿಯವನು ಎಂದೂ, ಜರ್ಮನ್ನರು ನನ್ನನ್ನು ಯೆಹೂದಿಯೆಂದೂ ಕರೆಯುತ್ತಿದ್ದರು.

ಜಾರ್ಜ್ ಬರ್ನಾರ್ಡ್ ಷಾ ಮತ್ತು ಜಿ.ಕೆ. ಚೆಸ್ಟರ್‌ಟನ್ ತಮ್ಮ ತಮ್ಮ ದೇಹಗಳ ಬಗ್ಗೆ ಮಾತ ನಾಡುತ್ತಿದ್ದರು. ಷಾ ಅವರು ತೆಳ್ಳಗೆ ನೀಳವಾಗಿ ದ್ದರು. ಚೆಸ್ಟರ್‌ಟನ್ ಅವರು ಕುಳ್ಳಗೆ ದಪ್ಪವಾಗಿ ದ್ದರು. ಚೆಸ್ಟರ್‌ಟನ್ ಅವರು ಷಾ ಅವರನ್ನು ಕುರಿತು, "ಷಾ ಅವರೇ, ನಿಮ್ಮ ತೆಳ್ಳನೆಯ ದೇಹ ವನ್ನು ನೋಡಿದ ಜನರು ಇಂಗ್ಲೆಂಡ್ ದೇಶವು ಕ್ಷಾಮದಿಂದ ಬಳಲುತ್ತಿರಬಹುದು ಎಂದು ಭಾವಿಸುತ್ತಾರೆ" ಎಂದು ಅಣಕವಾಡಿದರು. ಇದಕ್ಕೆ ಷಾ ಅವರು ಸುಮ್ಮ ನಿರದೆ, ಚೆಸ್ಟರ್‌ಟನ್ ಅವರಿಗೆ ಹೀಗೆ ಉತ್ತರಿಸಿದರು: "ಚೆಸ್ಟರ್‌ಟನ್ ಅವರೇ, ಇಂಗ್ಲೆಂಡ್ ದೇಶವು ಕ್ಷಾಮದಿಂದ ಪರಿಪೀಡಿತವಾಗಿರುವುದಕ್ಕೆ ಏನು ಕಾರಣ ಎಂದು ನಿಮ್ಮ ಧಢೂತಿ ದೇಹಾಕೃತಿಯನ್ನು ನೋಡಿದ ಕೂಡಲೆ ಗೊತ್ತಾಗು ತ್ತದೆ!"

ಸಂಗ್ರಹ: ಎನ್. ಗೋಪಾಲ್